# ಕಿಟಕಿ ಸ್ನೇಹಿತರು



**ಎಡೆಯೂರು ಪಲ್ಲವಿ**

ಕಲೆ: ಸಂತೋಷ್ ಸಸಿಹಿತ್ಲು

ಒಂದು ದೊಡ್ಡ ಬಂಗಲೆ. ಆ ಬಂಗಲೆ ಪಕ್ಕ ಒಂದು ಟಾರು ರಸ್ತೆ. ರಸ್ತೆಯಾಚೆ ಅರಳಿ ಮರದ ಕಟ್ಟೆ. ಆ ಬಂಗಲೆಯಲ್ಲಿ ಸನ್ನಿ, ಬ್ರೀಜಿ ಮತ್ತು ಕ್ರೀಟಾ ಎಂಬ ಮೂರು ಕಿಟಕಿಗಳು ವಾಸಿಸುತ್ತಿದ್ದವು. ಸನ್ನಿ ಮತ್ತು ಬ್ರೀಜಿ ಮನೆಯ ಕಿಟಕಿಗಳಾಗಿದ್ದರೆ, ಸ್ನೇಹಿತ ಕ್ರೀಟಾ ಕಂಪ್ಯೂಟರ್‌ನ ಕಿಟಕಿಯಾಗಿತ್ತು.

ಒಂದು ಬೆಳಗಿನ ಸಮಯ, ಪ್ರಕಾಶಮಾನವಾಗಿ ಸೂರ್ಯ ಉದಯಿಸುತ್ತಾ ತನ್ನ ಚಿನ್ನದ ಬೆಳಕನ್ನು ಸನ್ನಿ ಮತ್ತು ಬ್ರೀಜಿ ಕಿಟಕಿಗಳ ಮೂಲಕ ಹಾಯ್ದು ಮನೆಯನ್ನು ಲಕ ಲಕ ಎಂದು ಹೊಳೆಯುವಂತೆ ಮಾಡಿದ್ದ. ತಂಗಾಳಿಯು ಮನೆಯನ್ನು ತಂಪಾಗಿರಿಸಿತ್ತು. ಕ್ರೀಟಾ ಸ್ವಲ್ಪ ದುಃಖದಿಂದ ಇರುವಂತೆ ಅವರಿಗೆ ಕಾಣಿಸಿತು.

ಸನ್ನಿ ಮೊದಲು ಮಾತನಾಡುತ್ತಾ, 'ಹೇ ಕ್ರೀಟಾ, ಏನಾಯ್ತು? ಯಾಕೆ ನಿನ್ನಲ್ಲಿ ನಗು ಮೊಗ ಇಲ್ಲ ಇವತ್ತು'. ಕಂಪ್ಯೂಟರ್‌ನ ಪರದೆಯ ಮೇಲಿದ್ದ ಕ್ರೀಟಾ, 'ನನಗೆ ಒಂದೇ ಕಡೆ ಕೂತು ಕೂತು ಬೋರ್ ಆಗ್ಬಿಟ್ಟಿದೆ. ನಾನು ಇಡೀ ದಿನವನ್ನು ಈ ಕಂಪ್ಯೂಟರ್‌ನಲ್ಲಿ ಕಳೆಯುತ್ತೇನೆ. ನನ್ನೊಂದಿಗೆ ಮಾತನಾಡಲು, ನಾನು ಮಾಡುವ ಕಾರ್ಯಗಳನ್ನು, ಮಾಡುವ ಸಾಹಸಗಳನ್ನು ಹಂಚಿಕೊಳ್ಳಲು ನನಗೆ ಯಾರೂ ಇಲ್ಲ' ಎಂದು ಹೇಳಿತು.

ಈಗ ಬ್ರೀಜಿ ಇನ್ನಷ್ಟು ತಂಗಾಳಿಯನ್ನು ಅದರ ಪರದೆಯತ್ತ ತೂರಿತು. ಕ್ರೀಟಾದ ಮುಖದಲ್ಲಿದ್ದ ದುಗುಡ ಕಡಿಮೆಯಾಯಿತು. ಬ್ರೀಜಿ ಹೇಳಿತು: 'ಕ್ರೀಟಾ, ಹಾಗೆ ನೋಡಿದ್ರೆ ನೀನು ಲಕ್ಕಿ. ಯಾಕಂದ್ರೆ ಜಗತ್ತಿನಲ್ಲಿರೋ ಎಲ್ಲವೂ, ಅಂದರೆ ಎಲ್ಲಾ ಸುದ್ದಿಗಳು, ಸ್ಥಳಗಳು ನಿನಗೆ ಕಾಣಿಸುತ್ತವೆ. ನಾವು ನೋಡಿಲ್ಲಿ, ಅದೇ ಮನುಷ್ಯರನ್ನು, ಮಳೆ-ಗಾಳಿ-ಬಿಸಿಲನ್ನು, ಮರ-ಗಿಡಗಳನ್ನ ಒಂದಿಷ್ಟು ಕಾಣಬಹುದಷ್ಟೆ' ಎಂದಿತು.

ಕ್ರೀಟಾ ಸದ್ದು ಮಾಡುತ್ತಾ, 'ಮನುಷ್ಯರ ಕಥೆಗಳು ತುಂಬಾ ವಿಚಿತ್ರ ಮತ್ತು ಕೌತುಕದಿಂದ ಕೂಡಿರುತ್ತವಂತೆ. ಅದರಲ್ಲೂ ಈಗಿನ ಮಕ್ಕಳು ತುಂಬಾ ತುಂಟರಂತೆ, ಬುದ್ಧಿವಂತರಂತೆ. ನಂಗೆ ಅವರ ಕಥೆಗಳೇ ಇಷ್ಟ ಆಗುತ್ತೆ' ಎಂದಿತು.

'ಹಾಗಾದ್ರೆ, ನಿನಗೆ ಬಿಡುವಾದಾಗಲೆಲ್ಲ ನಾವು ನಮ್ಮ ಕಥೆಗಳನ್ನು ಹಂಚಿಕೊಳ್ಳಬಹುದು' ಎಂದಿತು ಸನ್ನಿ.

ಬ್ರೀಜಿ ಒಪ್ಪಿಗೆ ಸೂಚಿಸುತ್ತಾ, 'ಖಂಡಿತವಾಗಿಯೂ! ನಾವು ಮನೆಯ ಕಿಟಕಿಗಳಾಗಿರಬಹುದು, ಆದರೆ ಕಂಪ್ಯೂಟರ್ ಕಿಟಕಿಯೊಂದಿಗೆ ಉತ್ತಮ ಸ್ನೇಹಿತರಾಗಿ ಅನುಭವ ಹಂಚಿಕೊಳ್ಳಬಹುದಲ್ಲ?' ಎಂದಿತು.

ಕ್ರೀಟಾದ ಪರದೆಯು ನಗುವಿನೊಂದಿಗೆ ಬೆಳಗಿತು. 'ಅರೆ! ಇದು ಮಜವಾದ ಐಡಿಯಾ! ನನಗೆ ನಿಮ್ಮಿಬ್ಬರೊಂದಿಗಿನ ಸ್ನೇಹ ಇಷ್ಟವಾಯ್ತು. ನೀವು ನೋಡುವ ಜನರು ಮತ್ತು ನಾನು ಇಲ್ಲಿಂದಲೇ ಜಗತ್ತಿನ ಸ್ಥಳಗಳನ್ನು ಈ ಕಂಪ್ಯೂಟರ್‌ನಲ್ಲಿ ಮೂಡಿಸುತ್ತೇನೆ. ಪರಸ್ಪರ ಕಥೆಗಳನ್ನು ಹಂಚಿಕೊಳ್ಳೋಣ!'

ಅಂದಿನಿಂದ ಸನ್ನಿ, ಬ್ರೀಜಿ ಮತ್ತು ಕ್ರೀಟಾ ಉತ್ತಮ ಸ್ನೇಹಿತರಾದರು. ಅವರು ಪ್ರತಿದಿನ ಹರಟೆ ಹೊಡೆಯುತ್ತಿದ್ದರು, ಹಾರುವ ಹಕ್ಕಿಗಳ ಬಗ್ಗೆ,